ಇ) ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಉತ್ತರಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ**

೬೯೩ (೨೨೧೪) ಶ್ರೀ ಆರ್. ಎನ್. ನಾಯಕ್ (ಭಟ್ಕಳ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಯು ಎಷ್ಟು ಕಡೆ ಕಾರ್ಯಗತವಾಗಿದೆ? ಎಲ್ಲೆಲ್ಲಿ ಮತ್ತು ಎಷ್ಟು ಎಕರೆ ಭೂಮಿಗೆ ನೀರು ಪೂರೈಸಲಾಗುತ್ತಿದೆ?

ಆ) ಎಲ್ಲೆಲ್ಲಿ ಕೆಲಸ ಕೈಗೆತ್ತಿಕೊಳ್ಳಲು ಸರ್ಕಾರ ಆಲೋಚಿಸಿದೆ? ಮತ್ತು ಎಷ್ಟು ಎಕರೆ ಪ್ರದೇಶಕ್ಕೆ ಆ ಮೂಲಕ ನೀರು ಪೂರೈಸ ಬಹುದು?

ಇ) ಉತ್ತರಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕೆರೆಗಳಿಂದ ನೀರು ಪೂರೈಸಲಾಗುತ್ತಿದೆ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು ೧೫ ಕಡೆ ಏತ ನೀರಾವಾರಿ ಯೋಜನೆಗಳು ಕಾರ್ಯಗತವಾಗಿವೆ. ಇವುಗಳಿಂದ ೬೯೬೪ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಮತ್ತು ಸಿರ್ಸಿ ತಾಲ್ಲೂಕಿನ ಮೊಗವಳ್ಳಿಯಲ್ಲಿ ಒಂದು ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಇದರಿಂದ ೬೯೫ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಲಿದೆ.

ಆ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಮೂಲಕ ೩೫ ಕಡೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶವಿದೆ. ಇವುಗಳಿಂದ ಸುಮಾರು ೨೬೨೪೦ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೯೫೭ ಕೆರೆಗಳಿಂದ ನೀರಾವರಿ ಸೌಲಭ್ಯ ಒದಗಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

**(ಅನುಬಂಧ)**

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತವಾಗಿರುವ, ಕೈಗೊಳ್ಳಲು ಉದ್ದೇಶಿಸಿರುವ ಏತ ನನೀರಾವರಿ ಯೋಜನೆಗಳ ಮತ್ತು ಜಿಲ್ಲೆಯಲ್ಲಿರುವ ಕೆರೆಗಳ ತಾಲ್ಲೂಕುವಾರು ವಿವರಗಳು

| ಅನು ಕ್ರಮ | ತಾಲ್ಲೂಕು | ಕಾರ್ಯನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ | ಕೈಗೊಳ್ಳಲು ಉದ್ದೇಶಿಸಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ | ನೀರಾವರಿ ಸೌಲಭ್ಯ ಒದಗಿಸುವತ್ತಿರುವ ಕೆರೆಗಳ ಸಂಖ್ಯೆ |
|---|---|---|---|---|
| ೧. | ಕಾರವಾರ | ೨ | ೭ | ೨೧ |
| ೨. | ಹೊನ್ನಾವರ | ೧೦ | ೮ | ೨೧ |

| | | | | |
|---|---|---|---|---|
| ೩. | ಅಂಕೋಲ | ೧ | ೩ | ೧೦ |
| ೪. | ಸಿರ್ಸಿ | ೧ | ೬ | ೨೨೧ |
| ೫. | ಕುಮಟಾ | ೧ | ೧ | ೧೩ |
| ೬. | ಹಳಿಯಾಳ | - | ೧ | ೧೭೬ |
| ೭. | ಮುಂಡಗೋಡ | - | ೩ | ೧೮೮ |
| ೮. | ಸಿದ್ದಾಪುರ | - | - | ೧೭೪ |
| ೯. | ಯಲ್ಲಾಪುರ | - | ೨ | ೮೦ |
| ೧೦. | ಭಟ್ಕಳ | - | - | ೧೦ |
| ೧೧. | ಜೋಯ್ಡಾ (ಸೂಪಾ) | - | ೪ | ೩೮ |
| | ಒಟ್ಟು | ೧೫ | ೩೫ | ೯೫೨ |

**ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರಿಗೆ ಕೊಡತಕ್ಕ ಸೌಲಭ್ಯಗಳು**

೬೯೪ (೨೧೯೨) ಶ್ರೀ ಎ. ಟಿ. ರಾಮಸ್ವಾಮಿ (ಆರಕಲಗೂಡ್):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರ ಸಂಬಳ ಮತ್ತು ಸೇವಾ ಸೌಲಭ್ಯಗಳು ತುಂಬಾ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ನೌಕರರ ಸಂಬಳ ಹಾಗೂ ಸೇವಾ ಸೌಲಭ್ಯ ಹೆಚ್ಚಿಸುವ ಸಲುವಾಗಿ ಹೆಚ್ಚುವರಿ ಅನುದಾನದ ಬಗ್ಗೆ ಬೇಡಿಕೆಯು ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಬಂದಿರುತ್ತದೆ?

ಈ) ಅದನ್ನು ಈಡೇರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಬಂದಿದೆ

ಇ) ಹೆಚ್ಚುವರಿ ಅನುದಾನದ ಅಂದಾಜಿನೊಂದಿಗೆ ಬೇಡಿಕೆ ಇತ್ತೀಚೆಗೆ ಬಂದಿದೆ.

ಈ) ಪರಿಶೀಲನೆಯಲ್ಲಿದೆ.

**ಪ್ರವಾಸೋದ್ಯಮ ಅಭಿವೃದ್ಧಿಗೆ ವಿದೇಶಿ ಸಂಸ್ಥೆಯಿಂದ ಪ್ರಸ್ತಾವನೆ**

೬೯೫ (೨೧೯೬) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;